ದಿನಾಂಕಃ 05.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಜಿ.ಎನ್. ವಕೀಲರಿಂದಃ**

ನನ್ನ ತಂದೆಯ ಹೆಸರು ನಾರಾಯಣ. ನಾನು ಪ್ರಸ್ತುತವಾಗಿ ಜೇನುಗದ್ದೆ ಪೋಸ್ಟ್, ಹ್ಯಾರಂಬಿ ಗ್ರಾಮ, ಕಾಂಡ್ಯ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ. ರವಿ ಎಂಬುವವರು ವ್ಯವಹಾರದ ಸಂಬಂಧ ಕಳೆದ 2 ವರ್ಷದಿಂದ ಪರಿಚಯ. ನಾನು ಕಾವೇರಿ ಗ್ರಾಮೀಣ ಬ್ಯಾಂಕ್ ಮತ್ತು ಬ್ಯಾಂಕ್ ಆಪ್ ಬರೋಡ ದಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನಾನು ರವಿ ರವರಿಗೆ ನೀಡಿರುವ ಚೆಕ್ ನ ಖಾತೆ ಸಂಖ್ಯೆ 337130 ಆಗಿರುತ್ತದೆ. ಪಿರ್ಯಾದಿದಾರರು ವಕೀಲರ ಮುಖಾಂತರ ನೀಡಿರುವ ನೋಟೀಸನ್ನು ನಾನು ಸ್ವೀಕರಿಸಿಕೊಂಡಿರುವುದಿಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ರವಿ ಎಂಬುವವರಿಗೆ ಹಣ ನೀಡಿರುವ ಬಾಬ್ತು ರವಿಯವರನ್ನು ನನ್ನ ಪರವಾಗಿ ಸಾಕ್ಷಿಯಾಗಿ ವಿಚಾರಣೆ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಪಿರ್ಯಾದಿದಾರರು ನೋಟೀಸನ್ನು ಜಾರಿ ಮಾಡಿದ ನಂತರದಲ್ಲಿ ನಾನು ಪೋಲಿಸ್ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಮತ್ತು ರವಿಯವರ ಮದ್ಯೆ ವ್ಯವಹಾರ ಸರಿ ಇದ್ದ ಕಾರಣ ದೂರನ್ನು ನೀಡಿರುವುದಿಲ್ಲ. ಹಣದ ವ್ಯವಹಾರದ ಬಾಬ್ತು ನನ್ನ ಮತ್ತು ಪಿರ್ಯಾದುದಾರರ ಮದ್ಯೆ ಹಲವು ವರ್ಷಗಳಿಂದ ಪರಿಚಯವಿರುತ್ತದೆ ಎಂದರೆ ಸರಿ. ಪಿರ್ಯಾದುದಾರರಿಗೆ ಚೆಕ್ ನ್ನು ನೀಡಲು ನಾನು ಒಬ್ಬನೇ ಹೋಗಿರುತ್ತೇನೆ.

2 ವರ್ಷಗಳಿಂದ ಪಿರ್ಯಾದಿದಾರರೊಟ್ಟಿಗೆ ವ್ಯವಹರಿಸುತ್ತಿದ್ದ ಬಾಬ್ತು ದಾಖಲಾತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ರವಿ ಎಂಬುವವರೊಟ್ಟಿಗೆ ವ್ಯವಹಾರವು ಮುಕ್ತಾಯವಾದ ನಂತರ ರವಿಯವರು ನಾನು ನೀಡಿದ ಚೆಕ್ ನ್ನು ಹಿಂತಿರುಗಿಸಿರುವುದಿಲ್ಲ ಎಂದು ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ನಾನು ರವಿಯೊಟ್ಟಿಗೆ ವ್ಯವಹಾರ ಮಾಡಲು ಹೋದ ಸಮಯದಲ್ಲಿ ರವಿ, ಪಿರ್ಯಾದುದಾರರು ಮನೆಯಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರ ಬಳಿ ಹಣವನ್ನು ಪಡೆದು ಅದನ್ನು ಹಿಂತಿರುಗಿಸಲು ಚೆಕ್ ನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ರವಿಯವರಿಗೆ ನಾನು ಅಡಿಕೆಯನ್ನು ಮಾರಾಟ ಮಾಡಿದ್ದು ನಾನು ರವಿಯವರಿಗೆ ನೀಡಬೇಕಿದ್ದ ಹಣವನ್ನು ಅದರಲ್ಲಿ ಜಮಾ ಮಾಡಿಕೊಂಡು ಉಳಿಕೆ ಮೊತ್ತವನ್ನು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಚೆಕ್ ನ್ನು 2 ದಿನದ ನಂತರ ಹಿಂತಿರುಗಿಸುವುದಾಗಿ ತಿಳಿಸಿ ರವಿಯವರು ಹಿಂತಿರುಗಿಸಿರುವುದಿಲ್ಲ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಒಂದು ವೇಳೆ ನಾನು ಹೇಳಿದಂತೆ ರವಿಯವರೊಟ್ಟಿಗೆ ವ್ಯವಹಾರ ಮಾಡಿದ್ದಲ್ಲಿ ಸದರಿ ವಿಷಯವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸುತ್ತಿದ್ದೆ ಎಂದರೆ ಸರಿ.

ನ್ಯಾಯಾಲಯದಿಂದ ಜಾರಿ ಮಾಡಿದ ನೋಟೀಸು ನಾನು ಈಗ ಪ್ರಸ್ತುತವಾಗಿ ವಾಸಿಸುತ್ತಿರುವ ವಿಳಾಸಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ ಸಾಲ ಪಡೆದು

ಅದನ್ನು ಹಿಂತಿರುಗಿಸದೇ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.